ನವಸಾಕ್ಷರ ಪುಸ್ತಕ ಮಾಲೆ ೯೯

ಪದವುಂಟು ನನ್ನ ಎದೆಯಲ್ಲಿ

ಕೆ. ಮಕಾಳಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೆ

ಾಯ

ಿ. ಎಸ್.
ಶನಾಲಯ

ಸ್ಯರು

ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೯೯

ಪದವುಂಟು ನನ್ನ ಎದೆಯಲ್ಲಿ

ಕೆ. ಮಕಾಳಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

PADAVUNTU NANNA YADEYALLI : By K. Makali. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಡಾ. ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು — ೫೬೦ ೦೦೪.

ಪದವುಂಟು ನನ್ನ ಎದೆಯಲ್ಲಿ

ಜನರು ಹಾಡುವ ಪದಗಳೇ ಜನಪದ ಹಾಡುಗಳು. ನಾಡಿನ ತುಂಬ ಇಂತಹ ಹಾಡುಗಳಿವೆ. ಮಗು ಜನಿಸುವಾಗ, ಮದುವೆ ಮಾಡುವಾಗ ಹಲವರು ಪದ ಹೇಳುವರು. ಕೆಲವರು ಸಾವನ್ನು ಕುರಿತೂ ಹಾಡುವರು. ಯುಗಾದಿ, ನಾಗರಪಂಚಮಿ, ಮೊಹರಂ ಮೊದಲಾದ ಹಬ್ಬಗಳಲ್ಲಿಯೂ ಜನ ಹಾಡುತ್ತಾರೆ. ಈ ಪುಸ್ತಕದಲ್ಲಿ ಅಂತಹ ಕೆಲವು ಹಾಡುಗಳನ್ನು ಆರಿಸಿ ಕೊಡಲಾಗಿದೆ. ಇವುಗಳನ್ನು ರಾಗವಾಗಿ ಹಾಡಿಕೊಳ್ಳಬಹುದು.

ಮೂರು ಸಾಲಿನ ಪದಗಳು

ಮೂರು ಸಾಲಿನ ಹಾಡುಗಳನ್ನು ತ್ರಿಪದಿಗಳೆಂದು ಕರೆಯುತ್ತಾರೆ. ಜನರು ತಮಗೆ ಏನು ತೋಚಿದೆಯೋ ಅವುಗಳನ್ನು ಮೂರು ಸಾಲುಗಳಲ್ಲಿ ಹೇಳಿದ್ದಾರೆ. ಕೆಳಗೆ ಅಂತಹ ಮೂರು ಸಾಲಿನ ಕೆಲವು ಪದಗಳನ್ನು ಕೊಡಲಾಗಿದೆ.

ಏಳುತಾಲೆ ನಾನೆದ್ದು ಯಾರ್‍ಯಾರ ನೆನೆಯಾಲೆ
ಎಳ್ಳು ಜೀರಿಗೆ ಬೆಳೆಯೋಳ | ಭೂತಾಯ
ಎದ್ದೊಂದು ಗಳಿಗೆ ನೆನೆದೇನ ||

ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟರೆ ಕೆಡಲಿ ಮನೆ ಕೆಲಸ | ಕಂದನಂತ
ಮಕ್ಕಳಿರಲವ್ವ ಮನೆತುಂಬ

ಕೂಸಿರುವ ಮನೆಯೊಳಗ ಬೀಸಣಿಗೆಯಾತಕ
ಕೂಸು ಕಂದವ್ವ ಒಳಹೊರಗೆ | ಆಡಿದರೆ
ಬೀಸಣಿಗೆ ಗಾಳಿ ಸುಳಿದಾವ ||

ಅಳುವ ಕಂದನ ತುಟಿಯು ಹವಳದ ಕುಡಿಹಂಗ
ಕುಡಿಹುಬ್ಬು ಬೇವಿನೆಸಳಂಗ | ಕಣ್ನೋಟ
ಶಿವನ ಕೈಯಲಗು ಹೊಳೆದಾಂಗ ||

ಆಡಿ ಬಾ ನನಕಂದ ಅಂಗಾಲ ತೊಳೆದೇನು
ತೆಂಗಿನಕಾಯಿ ಸಿಹಿನೀರ | ಇಟಗೊಂಡು
ಬಂಗಾರದ ಮೋರೆ ತೊಳೆದೇನು ||

ಹಾವಿನ ಹೆಡೆ ಚೆಂದ ಮಾವಿನ ಮಿಡಿ ಚೆಂದ
ಹಾರಾಡಿ ಬರುವ ಗಿಣಿ ಚೆಂದ | ಕಂದನೆ
ನೀ ಚೆಂದ ನಮ್ಮ ಮನೆಗೆಲ್ಲ ||

ಸರಕಾರ ಎನ್ನೋದು ದರಶಾರ ನನಗಿಲ್ಲ
ಸರಕಾರದಾಗ ಸರಿಪಾಲು | ತರುವಂಥ
ಸರದಾರ ಮಗನು ಮನೆಯಾಗ

ಹಾಲುಂಡ ತವರಿಗೆ ಏನೆಂದು ಹಾಡಲೆ
ಹೊಳೆದಂಡೆಲಿರುವ ಕರಕೀಯ | ಕುಡಿಹಂಗ
ಹಬ್ಬಲೇ ಅವರ ರಸಬಳ್ಳಿ

ತಂದೆಯ ನೆನೆದರೆ ತಂಗಳು ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ವನ | ನೆನೆದರೆ
ಮಾಸಿದ ತಲೆಯು ಮಡಿಯಾಯ್ತು

ಕಾಶೀಗೆ ಹೋಗಲಕ ಏಸೊಂದು ದಿನ ಬೇಕು
ತಾಸ್ಹೊತ್ತಿನ ಹಾದಿ ತವರೂರು | ಮನೆಯಾಗೆ
ಕುಂತಾಳೆ ಕಾಶಿ ಹಡದವ್ವ




ಸರದಾರ ಬರುವಾಗ ಸುರಿದಾವ ಮಲ್ಲಿಗಿ
ದೊರೆ ತನ್ನ ತಮ್ಮ ಬರುವಾಗ ಯಾಲಕ್ಕಿ
ಗೊನೆಬಾಗಿ ಹಾಲು ಸುರಿದಾವ ||

ಮಡದೀಯ ಬಡಿದಾನ | ಮನದಾಗೆ ಮರುಗ್ಯಾನ
ಒಳಗ್ಹೋಗಿ ಸೆರಗಾ ಹಿಡಿಯೂತ | ಕೇಳ್ಯಾನ
ನಾ ಹೆಚ್ಚೋ ನಿನ್ನ ತವರ್ಹೆಚ್ಚೋ ||

ಅಡಗೀಯ ಮನೆಯಾಗ । ಮಡದೀಯ ಸುಳಿವಿಲ್ಲ
ಅಡಿಗೆ ಬಾಯಿಗೆ ರುಚಿಯಿಲ್ಲ ಹಡೆದವ್ವ
ಮಡದಿ ತವರೀಗೆ ಹೊರಟಾಳ ||

ಹಚ್ಚಡದ ಪದರಾಗ । ಅಚ್ಚಮಲ್ಲಿಗೆ ಹೂವ ||
ಬಿಚ್ಚಿ ನನಮೇಲೆ ಒಗೆವಂಥ । ರಾಯರನ
ಬಿಟ್ಹ್ಯಾಂಗ ಬರಲೆ ಹಡೆದವ್ವ ||

ಅಂಗೀಯ ಮೇಲಂಗಿ ಚಂದೇನ ನನರಾಯ
ರಂಬಿ ಮೇಲ ರಂಬಿ ಪ್ರತಿರಂಬಿ । ಎಂದರೆ
ಚೆಂದೇನೋ ರಾಯ ಮನೆಯಾಗೆ ||



ಪದ ಬಂದರೆ ಹೇಳು । ಬಾರದಿರೆ ಶರಣಾಗು ।
ಪದವುಂಟು ನನ್ನ ಎದೆಯಲ್ಲಿ । ನೋವಿನ
ಎಳೆಯುಂಟು ನನ್ನ ಒಡಲಲ್ಲಿ ||

ಮಳೆಯ ಹಾಡು

ನಾಡಿನ ಜನರು ಮಳೆಗಾಗಿ ಕಾತರಿಸುತ್ತಾರೆ. ಮಳೆ ಬಂದರೆ ಬೆಳೆ. ಬೆಳೆ ಬಂದರೆ ಸಂಪತ್ತು. ಮಳೆ ಬಾರದೇ ಇದ್ದರೆ ಬೆಳೆಯೂ ಇಲ್ಲ, ಸಂಪತ್ತೂ ಇಲ್ಲ. ಇದನ್ನು ತಿಳಿದ ಜನ ಮಳೆ ಹಾಡನ್ನು ಹೇಳುತ್ತಾರೆ. ಮಳೆ ಇಲ್ಲದಿದ್ದರೆ ಆಗುವ ಅನಾಹುತಗಳನ್ನು ವಿವರಿಸುತ್ತಾರೆ.

ಬಣ್ಣದ ಗುಬ್ಯಾರು ಮಳೆರಾಜಾ । ಅವರು ।
ಮಣ್ಣಾಗಿ ಹೋದರು ಮಳೆರಾಜಾ ।
ಬಣ್ಣದ ಗುಬ್ಯಾರು ಮಣ್ಣಾಗಿ ಹೋದರು
ಅನ್ಯದ ದಿನ ಬಂದು ಮಳೆರಾಜಾ ॥

ಒಕ್ಕಲಗೇರಾಗ್ಯ ಮಳೆರಾಜಾ । ಅವರು ।
ಮಕ್ಕಳ ಮಾರ್‍ಯಾರು ಮಳೆರಾಜಾ
ಮಕ್ಕಳ ಮಾರೀ ರೊಕ್ಕ ಹಿಡದುಕೊಂಡು
ಭತ್ತಂತ ತಿರುಗ್ಯಾರು ಮಳೆರಾಜಾ ॥

ಸೂಲಗಿ ಹಿಟ್ಟಿನಾಗ ಮಳೆರಾಜಾ । ಅವರು
ಸುಣ್ಣನ್ನು ಕೂಡಿಸ್ಯಾರ ಮಳೆರಾಜಾ
ಹಸ್ತು ಬಂದ ಕೇರಿ ಗಪಗಪ ತಿಂದು
ಒದ್ದಾಡಿ ಸತ್ತಾರ ಮಳೆರಾಜಾ ॥

ಗಿದ್ದನ ಅಕ್ಯಾಗ ಮಳೆರಾಜಾ ಅವರು
ಅಪುವನ್ನು ಕೂಡ್ಯಾರ ಮಳೆರಾಜಾ
ಸಣ್ಣ ಕೂಸಿಗೆ ಮನ್ನಿಸಿ ಉಣಸ್ಯಾರ
ಕಣ್ಣನ್ನೇ ಮುಚ್ಯಾವ ಮಳೆರಾಜಾ ॥

ಗಂಡುಳ್ಳ ಬಾಲ್ಯಾರು ಮಳೆರಾಜಾ | ಅವರು
ಭಿಕ್ಷಾಕ ಹೊರಟಾರ ಮಳೆರಾಜಾ
ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೊರಟಾರು
ಅನ್ಯದ ದಿನ ಬಂದು ಮಳೆರಾಜಾ ||

ಸ್ವಾತೀಯ ಮಳೆ ಬಂದು ಮಳೆರಾಜಾ | ಸುತ್ತ
ದೇಶಕ ಆಗ್ಯಾದ ಮಳೆರಾಜಾ
ಹಳ್ಳ ಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪ ಮಳೆರಾಜಾ

ಮಾಯದಂಥ ಮಳೆ

ಮಳೆ ಬಾರದಿದ್ದರೆ ಆಗುವ ಬೇಸರ ಮಳೆ ಬಂದಾಗ ನಾಶ ಆಗುತ್ತದೆ. ನಮ್ಮ ಜನರು ಮಾಯದಂಥ ಮಳೆ ಬಂದದ್ದನ್ನು ಹೀಗೆ ಕೊಂಡಾಡಿದ್ದಾರೆ.

ಮಾಯದಂಥ ಮಳೆ ಬಂತಣ್ಣ
ಮದಗದ ಕೆರೆಗೆ (ಪಲ್ಲವಿ)

ಅಂಗೈನಷ್ಟು ಮೋಡನಾಗಿ
ಭೂಮಿತೂಕದ ಗಾಳಿಬೀಸಿ
ಗುಡುಗಿಗೂಡಾಗಿ ಚೆಲ್ಲಿದಳೋ
ಗಂಗಮ್ಮತಾಯಿ

ಅಣ್ಣೇನಳ್ಳಿ ಅಣ್ಣೇಗೌಡ
ಮದಗದೂರ ಮಾಯಣ್ಣಗೌಡ
ನೀನೊದವಿ ಮಾಡಿ ಗುಳ್ಳೇವ ತೆಗಿಸಯ್ಯೋ
ನಾ ನಿಲ್ಲುವಳಲ್ಲ

ಆರುಸಾವಿರ ಒಡ್ಡರ ಕರೆಸಿ
ಮೂರು ಸಾವಿರ ಗುದ್ದಲಿ ತರಿಸಿ
ಕಲ್ಲುಕಲ್ಲಿಗೆ ಮಣ್ಣನೆ ಸುರಿಸಯ್ಯೋ
ನಾ ನಿಲ್ಲುವಳಲ್ಲ
ಸೊಲ್ಲುಸೊಲ್ಲಿಗೆ ಮಂತ್ರವ ಹಾಕಿಸಯ್ಯೋ
ನಾ ನಿಲ್ಲುವಳಲ್ಲ...

ಆರು ಸಾವಿರ ಆಡನೆ ತರಿಸಿ
ಮೂರು ಸಾವಿರ ಕುರಿಗಳ ತರಿಸಿ
ಕಲ್ಲುಕಲ್ಲಿಗೆ ರಯಿತವ ಬಿಡಿಸಯ್ಯೋ
ನಾ ನಿಲ್ಲುವಳಲ್ಲ

ಸೊಲ್ಲುಸೊಲ್ಲಿಗೆ ಮಂತ್ರವ ಹಾಕಿಸಯ್ಯೋ
ನಾ ನಿಲ್ಲುವಳಲ್ಲ
ಮಾಯದಂಥ ಮಳೆಬಂತಣ್ಣ
ಮದಗದಕೆರೆಗೆ....

ಅಣ್ಣ ತಂಗಿ ಜಗಳ

ನಮ್ಮಲ್ಲಿ ಅಣ್ಣನೆಂದರೆ ಸಾಕು, ತಂಗೀಗೆ ತುಂಬ ಪ್ರೀತಿ.

ಸಂಪಿಗೆ ಹೂವಿಗೆ ನುಂಪಿಲ್ಲ ನಮ್ಮ ಮಂಡೆ
ಸಂತೆಗೆ ಹೋದ ಹಿರಿಯಣ್ಣ। ಬರುವನಕ
ಸಂತೋಷವಿಲ್ಲ ಮನದಲ್ಲಿ॥

ಎಂದು ಅವಳು ಹಾಡುತ್ತಾಳೆ. ಹಾಗೆ ಅಣ್ಣನಿಗಾದರೂ ಅಷ್ಟೆ. ತಂಗಿ ಅಂದರೆ ತುಂಬ ಪ್ರೀತಿ. ತಂಗೀಗೆ ಮದುವೆ ಆಗಿ ಆಕೆ ತವರಿಗೆ ಹೊರಟಳೆಂದರೆ ಅಣ್ಣನಿಗೆ ಬೇಸರ -

ತಂಗೀಯ ಕಳಿಸ್ಯಾನು ।ತೆವರೇರಿ ನಿಂತಾನು।
ಅಂಗೀಯ ಬೆವರ ಒರಸ್ಯಾನು। ಅಣ್ಣಯ್ಯ
ಇಂದೀಗೆ ತಂಗಿ ಎರವೆಂದ॥

ಇಂತಹ ಪ್ರೀತಿಯ ನಡುವೆ ಬರುವವಳು ಅತ್ತಿಗೆ. ಆಕೆ ಅಣ್ಣನ ಮನಸ್ಸನ್ನು ಕೆಡಿಸುತ್ತಾಳೆ ಎಂಬ ಭಯ ತಂಗಿಗೆ. ಅದಕ್ಕೆ ಆಕೆ,

ಅಣ್ಣನ ಹೆಂಡತಿ ಕಣ್ಣೀಗೆ ಒಳ್ಳೆಯವಳು
ಸುಣ್ಣದ ನೀರ ಒಲೆ ಮೇಲೆ ಇಟುಕೊಂಡು
ತಣ್ಣಗಿನ ಹಾಲೆಂದು ಬಡಿಸ್ಯಾಳು॥

ಎಂದು ಹೇಳುತ್ತಾಳೆ. ಮದುವೆಯ ಹಿಂದಿನ ದಿವಸ ಅತ್ತಿಗೆಯ ಕಾರಣವಾಗಿ ಅಣ್ಣ ತಂಗಿ ಜಗಳವಾಡಿದ ಕತೆಯೊಂದು ಕೆಳಗಿದೆ

ಸಾಂವಕ್ಕಿ ಕುಟ್ಟು ಅಂದರೆ...

ತಂಗಿ: ಸಾಂವಕ್ಕಿ ಕುಟ್ಟೆಂದರೆ ಸೆರಗಾಸಿ ಮಲಗವಳೆ
ಎಬಸಣ್ಣ ನಿನ್ನ ಮಡದೀಯ

ಅಣ್ಣ: ಮಡದೀನ ಎಬಿಸಿದರೆ ಅರೆ ನಿದ್ದಿನಾದಾವ
ಎರಡೊಬ್ಬಿ ಮಾಡಿ ಥಳಸವ್ವ

ತಂಗಿ: ಎರಡೊಬ್ಬಿ ಮಾಡಿದರೆ ಕರಡಕ್ಕಿನಾದಾವ
ಕರಡಕ್ಕಿ ಜ್ವಾಳ ನುರಿಯಾವ॥

ಅಣ್ಣ: ಕುಟ್ಟಿದರ ಕುಟ್ಟವ್ವ ಕಿರಿಕಿರಿ ಮಾಡಬೇಡ
ಬಂದ ದಾರಿ ಹಿಡಿದು ನಡಿ ತಂಗೀ

ತಂಗಿ: ಎತ್ತಾರೆ ತಾರಣ್ಣ ಬಂಡೀಯ ಬಿಗಿಯಣ್ಣ
ಹೊರಡೂವೆ ನನ್ನ ಮನಿಗಣ್ಣ

ಅಣ್ಣ: ಎತ್ತು ನಮ್ಮಲ್ಲಿಲ್ಲ ಬಂಡಿ ನಮ್ಮಲ್ಲಿಲ್ಲ
ಬಂದ ಹಾದಿಯ ಹಿಡಿದು ನಡಿ ತಂಗೀ

(ತಂಗಿ ತನ್ನ ಗಂಡನ ಮನೆಗೆ ಹೊರಟು ಹೋಗುತ್ತಾಳೆ. ಆಗ ಅಣ್ಣನ ಮನೆಯಲ್ಲಿ ಏನಾಯಿತು ಅಂತಂದರೆ)

ತಂಗಿ ಹೋದ ಮರುದಿನ ಹೆಂಡ್ತೀಗೆ ಬೇನೆ ಬಂತು
ಮನೆಯಾಗಿನ ಮಕ್ಕಳಿಗೆ ಉರಿ ಬಂತೋ

ಮನೆಯಾಗಿನ ಮಕ್ಕಳಿಗೆ ಉರಿ ಬಂತೆಂದರೆ
ದೇವರ ಕೇಳಾಕ ನಡೆದಾನು

ಕೇಳಿಸಿ ನೋಡಿದರೆ ದೇವರಿಲ್ಲ ದಿಂಡರಿಲ್ಲ
ಮನೆಯಾಗಿನ ಹೆಣಮಗಳ ಉಸಿರಂದ

(ಗಡಿಬಿಡಿಗೊಂಡ ಅಣ್ಣ ಈಗ ತಂಗಿ ಮನೆಗೆ ಹೋಗುತ್ತಾನೆ. ಅಲ್ಲಿ ಮಾತುಕತೆ ನಡೆಯುತ್ತದೆ)

ತಂಗಿ: ಎಂದಿಲ್ಲದ ಅಣ್ಣಯ್ಯ ಇಂದ್ಯಾಕೆ ಬಂದಾನ
ಜಗಲಿಯ ಮೇಲೆ ಕುಳಿತಾನ॥

ಅಣ್ಣ: ಕುಂದ್ರಾಕೆ ಬಂದಿಲ್ಲ ನಿಂದ್ರಾಕೆ ಬಂದಿಲ್ಲ
ಬರಬೇಕ ತಂಗೀ ಮದುವೀಗೆ॥

ತಂಗಿ: ಮಜ್ಜಿಗೆ ಮಾಡವರಿಲ್ಲ। ಬೆಣ್ಣೆ ತೆಗೆವವರಿಲ್ಲ।
ಹ್ಯಾಂಗ ಬರಲಣ್ಣ ಮದುವೀಗೆ॥

ಅಣ್ಣ: ಮಜ್ಜೀಗೆ ಮಾಡುವರ। ಬೆಣ್ಣೀಯ ತೆಗೆವವರ।
ಕಳುಹಿಸಿಕೊಡುವೆ ಬರಬೇಕಾ॥

ತಂಗಿ: ಬೇಸಿಗೆ ಬಿಸಿಲಣ್ಣ। ಕೂಸಿನ ತಾಯಣ್ಣ
ಹ್ಯಾಂಗ ಬರಲಣ್ಣ ಮನೆಗೀಗ॥

ಅಣ್ಣ: ಪಲ್ಲಕ್ಕಿ ನಾ ಕೊಡುವೆ। ತೊಟ್ಟಿಲ ನಾ ಕೊಡುವೆ।
ಬರಬೇಕ ತಂಗಿ ಮದುವೀಗೆ॥

ತಂಗಿ: ಬಂದಾರೆ ಬರುವೇನು। ಬಾಗಿಲಲಿ ನಿಲುವೇನು।
ಅಣ್ಣೆಂದು ನಿನ್ನ ಕರೆವೇನೂ॥

ಅಣ್ಣ: ನಮ್ಮಲ್ಲಿ ಹುಟ್ಟೀದಿ। ನಮ್ಮಲ್ಲಿ ಬೆಳೆದೀದಿ
ಇಟ್ಟು ಮಾತೆಲ್ಲಿ ಕಲಿತೆವ್ವ॥

ತಂಗಿ: ಅಡವೀಲಿ ಹುಟ್ಟೀದೆ। ಅಡವೀಲಿ ಬೆಳೆದೀದೆ
ಎಲಿಗೊಂದ ಮಾತ ಕಲಿತೇನು॥

(ಹೀಗೆ ಜಗಳ, ಮುಂದೇನಾಯಿತೋ ತಿಳಿಯದು. ಬಹುಶಃ ಆಕೆ ಅಣ್ಣನೊಂದಿಗೆ ಮದುವೆ ಮನೆಗೆ ಹಿಂದಿರುಗಿ ಬಂದಿರಬೇಕು)

ತಂಗಿಯ ಕಾತರ

ಅತ್ತಿಗೆಯ ಕಾರಣಕ್ಕೆ ಅಣ್ಣನೊಂದಿಗೆ ಜಗಳವಾಡಿದ ತಂಗಿಗೆ, ತವರಿನ ಮೋಹ ಅಳಿದಿಲ್ಲ. ಆಷಾಢ ಬಂತೆಂದರೆ ಆಕೆ ಅಣ್ಣನ ಹಾದಿ ಕಾಯುತ್ತಾಳೆ, ತವರಿಗೆ ಹೋಗಲು ಕಾತರಿಸುತ್ತಾಳೆ-

ಆಷಾಢಮಾಸ ಬಂದೀತವ್ವ।
ಅಣ್ಣ ಬರಲಿಲ್ಲ ಕರಿಯಾಕ।
ಎಷ್ಟು ನೋಡಲೆ ಅಣ್ಣನ ದಾರಿ॥ ಆಷಾಢಮಾಸ॥



ಹೊತ್ತು ಮುಳುಗುವ್ಯಾಳೆದೊಳಗ।
ದೀಪ ಹಚ್ಚು ಮನೀಯೊಳಗೆ॥
ಅಣ್ಣ ಕರಿಯಾಕ ಬಂದಾನ ನಾರಿ॥ ಆಷಾಢಮಾಸ॥

ರೊಟ್ಟಿ ಬುತ್ತಿ ಮಾಡಿಕೊಂಡು।
ಎತ್ತಿನ ಮ್ಯಾಲೆ ಹೇರಿಕೊಂಡು।
ಎಂದು ಹೋದೇನ ತವರಿಗೆ ನಾರಿ॥ಆಷಾಢಮಾಸ॥

ಹಿಂದೀನೆತ್ತ ಹಿಂದೇ ಇರಲಿ।
ಮುಂದೀನೆತ್ತ ಮುಂದೇ ಇರಲಿ।
ಎಂದು ಕಂಡೆನವ್ವ ತಾಯೀ ಮಾರಿ॥ ಆಷಾಢಮಾಸ॥

ತಾಯೀ ಬಂದು ನೀರು ಕೊಟ್ಲು।
ತಾಯಿ ಮಾರಿ ಕಂಡೇನವ್ವ।
ಹಸಿದ ಹೊಟ್ಟೆ ಉಂಡಂಗಾತ ನಾರಿ॥ ಆಷಾಢಮಾಸ॥

ಸರಸದ ಪದಗಳು

ಗಂಡ-ಹೆಂಡಿರ ನಡುವೆ ಜಗಳ ಇರುವ ಹಾಗೆ ಸರಸವೂ ಇರುತ್ತದೆ. ಮದುವೆಗೆ ಮುನ್ನ ಇಂತಹ ಸರಸ ಜಾಸ್ತಿ ಇರುತ್ತದೆ. ಕೆಳಗಿನ ಪದ ನೋಡಿ, ಭಾವ-ನಾದಿನಿ ಸರಸ ಹೇಗಿದೆ?



ಎಲೆಯೋ ಎಲೆಯೋ ಯಲಿಯ ಬಳ್ಳ್ಯೊಂದೆಲೆಯೊ।
ಈ ಬಳ್ಳಿ ಮೆಟ್ಟೀ ಯಲೆಯ ಕುಯ್ಯೋಳ್ಯಾರೆ॥

ನಾ ಕಾಣೋ ಬಾವಾ ನಿನ ಸೋದರತ್ತೆ ಮಗಳು॥
ನೀ ಸೋದರತ್ತೆ ಮಗಳಾದ್ರೆ ಸೋತೇಲೆಕುಯ್ದೆಣ್ಣೆ।
ಸೋತೇಲೆ ಕುಯ್ಯೋಕೆ ನೀ ತಂದ್ದೆಂಗುಸು ಅಲ್ಲಾ॥

ಹಾ ಹೋ ಹೆಣ್ಣೇ ನೀ ದಿಂಡೆಕಾರ್ಹೆಣ್ಣೆ।
ನನಗ್ಯಾಕೊ ದಿಂಡು ನಿನ ಬಾಳೀಗೆ ದಿಂಡು॥

ಹಾ ಹೋ ಹೆಣ್ಣೇ ನೀ ಸೊಕ್ಕೀನ ಹೆಣ್ಣೇ।
ನನಗ್ಯಾಕೊ ಸೊಕ್ಕು ನಿನ್ನಡಕೀಗೆ ಸೊಕ್ಕು॥

ಹಾ ಹೋ ಹೆಣ್ಣೇ ನೀ ರೂಪೀನ್ಹೆಣ್ಣೆ।
ನನಗ್ಯಾಕೊ ರೂಪು ನಿನ ಗೊಂಬೆಗೆ ರೂಪು॥

ಹಾ ಹೋ ಹೆಣ್ಣೇ ನೀ ಚದುರಿನ್ಹೆಣ್ಣೆ।
ನನಗ್ಯಾಕೊ ಚದುರು ನಿನ ಸೂಳಿಗೆ ಚದುರು॥

ಹಾ ಹೋ ಹೆಣ್ಣೇ ನೀ ಮದಕಿನ ಹೆಣ್ಣೇ।
ನನಗ್ಯಾಕೊ ಮದಕು ನಿನ್ನ ಆನೆಗೆ ಮದಕು॥

ಹಾ ಹೋ ಹೆಣ್ಣೇ ನೀ ತೊಡಕೀನ್ಹೆಣ್ಣೆ।
ನನಗ್ಯಾಕೊ ತೊಡಕು ನಿನ್ನಾಲಿಗೆ ತೊಡಕು॥

ಹಾ ಹೋ ಹೆಣ್ಣೇ ನೀ ಮಲಕೀನ್ಹೆಣ್ಣೆ।
ನನಗ್ಯಾಕೊ ಮಲಕು ನಿನ್ನೊಡ್ಯಾಣ್ಕೆ ಮಲಕು॥

ಹಾ ಹೋ ಹೆಣ್ಣೇ ನೀ ಚಬಕೀನ ಹೆಣ್ಣೆ।
ನನಗ್ಯಾಕೋ ಚಬಕು ನಿನ್ನ ಕುದರೀಗೆ ಚಬಕು॥

ಹಾ ಹೋ ಹೆಣ್ಣೆ ನೀ ಕೊಟ್ಟೀನ ಹೆಣ್ಣೆ।
ನನಗ್ಯಾಕೊ ಕೊಟ್ಟು ನಿನ ಹಾಳೀಗೆ ಕೊಟ್ಟು॥

ಕಾಶಿಗೆ ಹೋದ ಹುಡುಗಿ

ಸರಸವಾಡುತ್ತಲೇ ಜಾಣತನವೂ ಪ್ರಕಟವಾಗುತ್ತದೆ. ಈ ಜಾಣತನದ ಮೇಲಾಟದಲ್ಲಿ ಯಾರೂ ಗೆಲ್ಲುವುದಿಲ್ಲ, ಯಾರೂ ಸೋಲುವುದಿಲ್ಲ. ಆದರೂ ಜಾಣತನದಲ್ಲಿ ಹುಡುಗಿಯರು ಒಂದು ಹೆಜ್ಜೆ ಮುಂದೇ ಇರುತ್ತಾರೆ. ಈ ಹಾಡಿನಲ್ಲಿ ಹುಡುಗಿಯೊಬ್ಬಳ ಜಾಣತನ ಪ್ರಕಟವಾಗಿದೆ.

ಪ್ರಶ್ನೆ: ಕಾಶಿಗೆ ನಾನು ಹೋಗಿದ್ದೆ, ಈಶ್ವರ ಪೂಜೆಯ ಮಾಡಿದ್ದೆ।
ಹ್ಯಾಂಗ್ಯಾಂಗ ಬಾಳುವೆ ಮಾಡಿದ್ಹೇಳ ಗೆಳತಿ॥

ಉತ್ತರ: ಒಬ್ಬನ್ನ ಒಳಗಿಟ್ಟೆ, ಒಬ್ಬನ್ನ ಹೊರಗಿಟ್ಟೆ।
ಒಬ್ಬನ್ನ ನೋಡಿ ನಗುತಿದ್ದೆ ಗೆಳೆಯ॥

ಪ್ರಶ್ನೆ: ಯಾವನ್ನ ಒಳಗಿಟ್ಟೆ, ಯಾವನ್ನ ಹೊರಗಿಟ್ಟೆ।
ಯಾವನ್ನ ನೋಡಿ ನಗುತಿದ್ದೆ ಗೆಳತಿ॥



ಉತ್ತರ: ಹಲ್ಲಿಟ್ಟ ಒಳಗಿಟ್ಟೆ, ಕುಂಕುಮ ಹೊರಗಿಟ್ಟೆ।
ಕನ್ನಡಿ ನೋಡಿ ನಗುತಿದ್ದೆ ಗೆಳೆಯ॥

ಪ್ರಶ್ನೆ: ಕಾಶಿಗೆ ನಾನು ಹೋಗಿದ್ದೆ, ಈಶ್ವರ ಪೂಜೆಯ ಮಾಡಿದ್ದೆ।
ಹ್ಯಾಂಗ್ಯಾಂಗ ಬಾಳುವೆ ಮಾಡಿದ್ಹೇಳ ಗೆಳತಿ॥

ಉತ್ತರ: ಒಬ್ಬನ್ನ ಕೂಡ್ರಿಸಿದ್ದೆ, ಒಬ್ಬನ್ನ ನಿಲಿಸಿದ್ದೆ।
ಒಬ್ಬನ್ನ ಗೂಡ ಎಳೆದಾಟ ಗೆಳೆಯ॥

ಪ್ರಶ್ನೆ: ಯಾವನ್ನ ಕೂಡ್ರಿಸಿದ್ದೆ, ಯಾವನ್ನ ನಿಲಿಸಿದ್ದೆ।
ಯಾವನ್ನ ಗೂಡ ಎಳೆದಾಟ ಗೆಳತಿ॥

ಉತ್ತರ: ಮಜ್ಜಿಗೆ ಗಡಗಿ ಕೂಡ್ರಿಸಿದ್ದೆ, ಕಡಗೋಲ ನಿಲಿಸಿದ್ದೆ।
ಹಗ್ಗದ ಗೂಡ ಎಳೆದಾಟ ಗೆಳೆಯ॥

ಪ್ರಶ್ನೆ: ಕಾಶಿಗೆ ನಾನು ಹೋಗಿದ್ದೆ, ಈಶ್ವರ ಪೂಜೆಯ ಮಾಡಿದ್ದೆ।
ಹ್ಯಾಂಗ್ಯಾಂಗ ಬಾಳುವೆ ಮಾಡಿದ್ಹೇಳ ಗೆಳತಿ॥

ಉತ್ತರ: ಒಬ್ಬನ್ನ ಕಟ್ಟಿದ್ದೆ, ಒಬ್ಬನ್ನ ಬಿಚ್ಚಿದ್ದೆ।
ಒಬ್ಬನ್ನ ಗೂಡ ಕೈಕೊಟ್ಟೆ ಗೆಳೆಯ॥

ಪ್ರಶ್ನೆ: ಯಾವನ್ನ, ಕಟ್ಟಿದ್ದೆ, ಯಾವನ್ನ ಬಿಚ್ಚಿದ್ದೆ।
ಯಾವನ್ನ ಗೂಡ ಕೈಕೊಟ್ಟೆ ಗೆಳತಿ॥

ಉತ್ತರ: ಆಕಳವ ಕಟ್ಟಿದ್ದೆ, ಕರುವ ನಾ ಬಿಚ್ಚಿದ್ದೆ।
ಹಿಂಡೂವ ಮೊಲೆಗೆ ಕೈಕೊಟ್ಟೆ ಗೆಳೆಯ॥

ಪ್ರಶ್ನೆ: ಕಾಶಿಗೆ ನಾನು ಹೋಗಿದ್ದೆ, ಈಶ್ವರ ಪೂಜೆಯ ಮಾಡಿದ್ದೆ।
ಹ್ಯಾಂಗ್ಯಾಂಗ ಬಾಳುವೆ ಮಾಡಿದ್ಹೇಳ ಗೆಳತಿ॥

ಉತ್ತರ: ಒಬ್ಬನ್ನ ಇಕ್ಕಿದ್ದೆ, ಒಬ್ಬನ್ನ ಎಳದಿದ್ದೆ।
ಒಬ್ಬನ ಕೈಯ ಹಿಡಿದಿದ್ದೆ ಗೆಳೆಯ॥

ಪ್ರಶ್ನೆ: ಯಾವನ್ನ ಇಕ್ಕಿದ್ದೆ, ಯಾವನ್ನ ಎಳೆದಿದ್ದೆ।
ಯಾವನ್ನ ಕೈಯ ಹಿಡಿದಿದ್ದೆ ಗೆಳತಿ॥

ಉತ್ತರ: ಕದವ ನಾ ಇಕ್ಕಿದ್ದೆ, ಅಗಳಿ ನಾ ಎಳೆದಿದ್ದೆ।
ದೀಪ ಕೈಯಾಗ ಹಿಡಿದಿದ್ದೆ ಗೆಳೆಯ॥

ಪ್ರಶ್ನೆ: ಕಾಶಿಗೆ ನಾನು ಹೋಗಿದ್ದೆ, ಈಶ್ವರ ಪೂಜೆಯ ಮಾಡಿದ್ದೆ।
ಹ್ಯಾಂಗ್ಯಾಂಗ ಬಾಳುವೆ ಮಾಡಿದ್ಹೇಳ ಗೆಳತಿ॥

ಉತ್ತರ: ಒಬ್ಬನ್ನ ಹಾಸಿದ್ದೆ, ಒಬ್ಬನ್ನ ಇಟ್ಟಿದ್ದೆ।
ಒಬ್ಬನ್ನ ಗೂಡ ಸೊಗನಿದ್ದೆ ಗೆಳೆಯ॥

ಪ್ರಶ್ನೆ: ಯಾವನ್ನ ಹಾಸಿದ್ದೆ, ಯಾವನ್ನ ಇಟ್ಟಿದ್ದೆ।
ಯಾವನ್ನ ಗೂಡ ಸೊಗನಿದ್ದೆ ಗೆಳತಿ॥

ಉತ್ತರ: ಹಾಸಿಗೆಯ ಹಾಸಿದ್ದೆ, ತಲೆದಿಂಬ ಇಟ್ಟಿದ್ದೆ।
ಹಚ್ಚಡ ಗೂಡ ಸೊಗನಿದ್ದೆ ಗೆಳೆಯ॥


ಸಂಪಿಗೆ ತೆನಿಯಂಥ ಹುಡುಗ

ನಮ್ಮ ಜನರು ಎಂತಹ ವರ್ಣನೆ ಮಾಡಬಲ್ಲರು? ಸಂತೆಗೆ ಹೊರಟ ಹುಡುಗನೊಬ್ಬನನ್ನು ನೋಡಿದ ಹುಡುಗಿ ಅವನನ್ನು ಹೀಗೆ ವರ್ಣಿಸುತ್ತಾಳೆ -

ಸಂಪಿಗಿ ತೆನಿಯಂಥ ಹುಡುಗ
ಸಂತ್ಯಾಗ್ಹಾದು ಹೋಗ್ತಾನ
ಹಂತೀಲೋಗಿ ಕೇಳಲೇನ ಹೆಸರ
ನನ್ನ! ಕಾಂತನ ರೂಪ ಹೊಂಟಾಗ ಹುಣ್ವೀ ಚಂದರ
ಇವನ! ಚಿಂತೀಯೊಳಗ ಜೀವಕ್ಕಿಲ್ಲ ಸ್ಥಿರಾರ

ಕನಸೀನಾಗ ಕಂಡಾಗಾಯ್ತು
ಮನಸೀನಂದು ಹೋಗವೊಲ್ದು
ಹಲಸಂಗಿ ಊರಾಗಿಲ್ಲ ಇವನಂತವರ ॥ಗೀಗೀಗೀ॥

ಇವನ ರೂಪ ಅಪರೂಪ
ಹಚ್ಚಿದಾಂಗ ಚಂದ್ರದೀಪ
ಏನ ತಿಳಿಪ ಹೊಟ್ಟ್ಯಾಗಿನ ಕರುಳ
ಕುಂತ್ರನಿಂತ್ರ ಇವನ ಧ್ಯಾನ
ಜೀವಕ್ಕಿಲ್ಲ ಸಮಾಧಾನ
ನಿದ್ದಿ ಇಲ್ಲ ಕಣ್ಗೆ ಹಗಲಿರುಳ



ಇವನ! ಹಸ್ತ ಏನ ಸಿಸ್ತ ಮಾವಿನ ತರಳ
ಮ್ಯಾಲ! ಕುಂದಲದ ಹರಳ ಉಂಗುರೊಪ್ಪ್ವ ಬೆರಳ ॥ಗೀಗೀಗೀ॥

ಮನಸೋತು ನನಗೂಡ
ಮಾತೊಂದು ಆಡವೊಲ್ಲ
ಪ್ರೀತಿಯಿಟ್ಟು ನನ್ನಮ್ಯಾಲ ಸರsಳ ॥ಗೀಗೀಗೀ॥

ಹಲ್ಲಗಲ್ಲ ಏನ ತಿಳಿಪ
ಕುಂಕುಮ ಕನ್ನಡಿಯಂಥ ಹೊಳಪ
ಸೂರ್ಯನಂಗ ಅವ್ವಾ ಇವನ ಸುರೂಪ
ಜೀವ!ತಾಳಲಾರ್ದೆ ಕೂತೀನವ್ವಾಬ್ಯಾಸತ್ತ!
ಚಕ್ಕರಗಣ್ಣ ಕೊಕ್ಕರ ಮೀಸಿ
ನಕ್ಕರ ಚಂದ ನನ್ನ ಮುಂದ
ತೊಟ್ಟ ಅಂಗಿ ಹೊತ್ತ ಶ್ಯಾಲಿ ಜರತಾರ
ಇವಾ! ಹತ್ತು ಮಂದ್ಯಾಗ ಮುತ್ತಿನಂಥ ಸರದಾರ
ಇವನ!ಚಿಂತಿಯೊಳಗ ಜೀವಕ್ಕಿಲ್ಲ ಸ್ಥಿರಾರ।
ಹಲಸಂಗಿ ಊರಾಗಿಲ್ಲ ಇವನಂತವರ ॥ಗೀಗೀಗೀ॥

ಅಸಲಜಾತ ಹೆಣ್ಣು

ಹುಡುಗೀಗೆ ಇಷ್ಟು ಸದರ ಇರಬೇಕಾದರೆ ಹುಡುಗನಿಗೆ ಎಷ್ಟು ಸದರ ಬೇಡ? ಆತನೇನು ಕಡಿಮೆ ಇಲ್ಲ. ಅವನು ಆಕೆಯನ್ನು ಹೀಗೆ ವರ್ಣಿಸುತ್ತಾನೆ.

ಅಸಲಜಾತ ಹೆಣ್ಣು
ಹೆಣ್ಣಸಲಜಾತ ಪದ್ಮಿನೀ
ಸುರತ ಚಂದ್ರುಣೀ
ಹೊಂಟೆ ನಾಗಿಣೀ। ನೋಡ ತಿರುಗಿ।

ಮರಿಗುದುರಿ ಕುಣಿಸ್ಡಿದ್ಹಂಗೆ ನಾಜೂಕು ನಿನ್ನನಡೆಗಿ।
ಹೊಳೆ ನೀರ ತೆರೆಯು ಹೊಡೆದಂಗೆ ಒದುತೆ ನಿಲಗಿ।
ತ್ರಿಲೋಕ ತಿರುಗಿ ಬಂದೆ ಹಾರಿ।
ಇಲ್ಲ ನಿನ್ನ ಜೋಡಿ
ರಂಭೆ ನಿನ್ನ ನೋಡಿ। ನಾಚ್ಯಾಳ ಕಡಿಗೀ
ಗರಗರಾ ತಿರುವುತೇ ಕಣ್ಣ।
ಕೆಂಪ ಮೈಬಣ್ಣ।

ಬೈತಲ ಸಣ್ಣಾ-ಕತ್ತಿಧಾರಿ॥
ನಿನ್ನ ಕಂಡು ಪಕ್ಷಿಗಳು ನಿಂತು ಹೌವ್ವಹಾರಿ।
ನಿನ್ನ ನಡಿಗೆ ನೋಡಿ ನವಿಲು ಕುಣಿವುದೆ ಮರತಾರಿ।
ನಿನ್ನ ಶಬ್ದ ಕೇಳಿ ಆಯ್ತುಲುಬ್ಧ।
ಕೋಗಿಲೆ ನಾಚಿಕದ್ದ।
ದನಾ ಬಿಟ್ಟಾವಾ ಎದ್ದ। ಹೋಯ್ತು ಹಾರಿ।



ನಿನ್ನ ಕಂಡು ಬಂತು ಭವಳೀಕಿ।
ಕೆಡೆದ್ದಂಗಾಯ್ತು ಚಿಕ್ಕಿ।


ಪಾರಿವಾಳದ್ಹಕ್ಕಿ ಕೇಳ್ಯಾವ ಒದರಿ।
ಆದಿ ವಿಷ್ಣುನರ್ಧಾಂಗಿಯಲ್ಲ ಈಕೆ ಸರಿ।
ಈಕೆ ನಡ್ಕೆ ನೋಡಿ ಸಿಂಹ ನಾಚಿ
ತಿರುವಿತ ಮಾರಿ।
ಏನು ತಪ್ಪಿ ಹುಟ್ಟಿದೆ ತರುಣಿ
ಬತ್ತೀಸ ಲಕ್ಷಣಿ।
ಮಾತಕೇಳಿ ಗಿಣೀ । ನಾಚಿ ಬೆದರಿ॥
ನಿನ್ನ ಮೊಗ ನೋಡಿ ಚವಣ್ಹಕ್ಕಿ
ನಾಚಿ ಜೀವಧಾರಿ ಇಲ್ಲ ಇಂಥಾಕಿ
ಎಷ್ಟು ಈಕಿ ಜೋಕ।
ಹಾಲಕ್ಕಿ ಆಯಿತು ಗಪ್ಪಾ।
ಏನು ಈಕಿ ರೂಪಾ ।ಹಚ್ಚಿದಂಗೆ ದೀಪ
ಚಂದ್ರನ ಬೆಳಕಾ॥

ತಿದ್ದಿತೀಡಿ ಗೊಂಬಿಹಾಂಗೆ ಮಾಡಿ
ರಂಭೆ ನಿನ್ನತಾಡಿ ।ಗರುಡ ಪಕ್ಷಿ ನೋಡಿ।
ನಾಚಿ ತನ್ನ ಜೀವಕ।
ಬಲ್ಪಲಾ ಪಕ್ಷಿ ಹೋದು ಬೆರೆತ।
ಹಾರಿತ ನನ್ನ ಸುರತ।
ಬಾರನೀ ಅರತ-ನಮ್ಮ ಮನಿಗಿ।

ನಾ ಬಿಟ್ಟೆನೀ ಅನ್ನ, ನೀರ, ನಿನ್ನ ಕಾಲಾಗ ಸೊರಗಿ।
ಹೊಳಿ ನೀರ ತೆರೆಯು ಹೊಡೆದಾಂಗ ನಿಲಗಿ।
ತ್ರಿಲೋಕ ತಿರುಗಿ ಬಂದೆ ಹಾಡಿ
ಇಲ್ಲ ನಿನ್ನ ಜೋಡಿ
ರಂಭೆ ನಿನ್ನ ನೋಡಿ ನಾಚ್ಯಾಳ ಕಡಿಗಿ।

ನಂಜುಂಡನ ಹಾಡು

ಜನಪದರಿಗೆ ನಂಜನಗೂಡಿನ ನಂಜುಂಡ ಅಂದರೆ ತುಂಬ ಮಮತೆ. ಅವನನ್ನು ಹೊಗಳಿದಷ್ಟೂ ಅವರಿಗೆ ತೃಪ್ತಿ ಇಲ್ಲ -



ಅದು ಬೆಟ್ಟ ಇದು ಬೆಟ್ಟವೋ ನಂಜುಂಡ
ನಂದ್ಯಾಲಗಿರಿ ಬೆಟ್ಟವೋ
ನಂದ್ಯಾಲಗಿರಿ ಬೆಟ್ಟಕೇ ನಂಜುಂಡ
ದಾಸಾಳಗಿಡ ಹುಟ್ಟಿತೋ

ದಾಸಾಳ ಹೂವ ತಂದೂ ನಂಜುಂಡ
ದಾರ್ಯಾಗೆ ಪೂಜೆ ಮಾಡಿ
ಹೂ ಬಾಡಿ ಹೋಯಿತಯ್ಯ ನಂಜುಂಡ
ಎದ್ದು ಬಾರಯ್ಯ ಮನೆಗೆ

ಕರಣಾಟ ಸೀಮೆದವನೇ ನಂಜುಂಡ
ಕರ್ಪೂರ ವೀಳೆದವನೇ
ನಿನ ಕರುಣೆ ತಪ್ಪಿದ ಮೇಲೇ ನಂಜುಂಡ
ಪರದೇಶಿ ನಾನಾದೆನೋ

ಪರದೇಶಿ ಆದಮೇಲೇ ನಂಜುಂಡ
ನನ ಚಿಂತೆ ನಿನಗ್ಯಾತಕೇ
ಪರಪಂಚ ನನಗ್ಯಾತಕೇ ನಂಜುಂಡ
ನನ ಚಿಂತೆ ನಿನಗ್ಯಾತಕೇ

ಹಸಿವಾದರೆ ಹಾಲುಕುಡಿಯೋ ನಂಜುಂಡ
ಬಿಸಿಲಾದರೆ ಬೆಣ್ಣೆ ತಿನ್ನೋ
ನಿದ್ದೆ ಬಂದರೆ ತೊಡೆಯ ಮೇಲೆ ನಂಜುಂಡ
ತೊಡೆ ಮೇಲೆ ನಿದ್ದೆ ಮಾಡೋ

ಸ್ವಾತೀಯ ಮಳೆ ಹುಯ್ಯಿತು ನಂಜುಂಡ
ಸಂಪಂಗಿಕೆರೆ ತುಂಬಿತು
ಸಂಪಂಗಿಕೆರೆಯ ಕೆಳಗೆ ನಂಜುಂಡ
ಕೆಂಬತ್ತಿ ನೆಲ್ಲ ಬಿತ್ತಿ

ಹಾಲು ಕೂಡೋಕೆ ಮುಂಚೆ ನಂಜುಂಡ
ಆದ ಮೂರು ಗಿಣಿ ಕೂತವು

ಹಾಲು ಕೂಡಿದ ಮೇಲೆ ನಂಜುಂಡ
ಆ ಮೂರು ಗಿಣಿ ಎದ್ದವು

ಸಾಲ್ಹಿಡಿದು ಕಬ್ಬ ನೆಟ್ಟು ನಂಜುಂಡ
ಮುಂಬಿಡಿದು ನೀರು ಕೊಟ್ಟು
ಜಲನೋಡಿ ಬಾವಿ ತೆಗೆಯೋ ನಂಜುಂಡ
ಕುಲನೋಡಿ ಹೆಣ್ಣ ತೆಗೆಯೋ

ಮೂಡಲ ಸೀಮೆದವನೇ ನಂಜುಂಡ
ಮುತ್ತಿನ ಹಾರದವನೇ
ಬಡಗಲ ಸೀಮೇದವನೇ ನಂಜುಂಡ
ಬಯಲಾದ ರೂಪದವನೇ

ಸುತ್ತೇಳು ಮಂಟಪದವನೇ ನಂಜುಂಡ
ಸೂರ್ಯಚಂದ್ರ ಪಾದದವನೇ
ಉದ್ದುದ್ದ ಮಂಡೆದವನೇ ನಂಜುಂಡ
ತಿದ್ದೂರಬೈಲದವನೇ

ಉದ್ದಂಡ ಮಂಡಲಕ್ಕೇ ನಂಜುಂಡ
ತಾನೊಬ್ಬ ಹೊರಟವನೇ
ತಾಯಿತಂದೆ ಇಲ್ಲದವನೇ ನಂಜುಂಡ
ತೊಡೆ ಮೇಲೆ ನಿದ್ದೆ ಮಾಡು

ಸಾಲು ತೆಂಗಿನಮರ ನಂಜುಂಡ
ಮೇಲೆ ನಂಜನ ಗುಡಿಯೋ
ಹದಿನೇಳು ಪರದಕ್ಷಿಣಾ ನಂಜುಂಡ
ಹದಿನೇಳು ತಿರುದಕ್ಷಿಣ.

ಬನ್ನಿಹಬ್ಬ

ಹಬ್ಬಗಳೆಂದರೆ ಜನರಿಗೆ ಸಂತಸ. ಎಲ್ಲ ಹಬ್ಬಗಳಲ್ಲಿಯೂ ಅವರು ಹಾಡುತ್ತಾರೆ. ಕುಣಿಯುತ್ತಾರೆ. ಕೋಲಾಟ ಆಡುತ್ತಾರೆ. ಬನ್ನಿ ಹಬ್ಬದಲ್ಲಿ ಆಡುವ ಕೋಲಾಟದಲ್ಲಿ ಹೇಳುವ ಹಾಡು ಈ ರೀತಿ ಇದೆ :



ಬನ್ನಿ ಮುಡಿಯೋಣ ಬಾರ ಕೋಲು ಕೋಲ
ಚಿನ್ನ ತರುವೋಣ ಬಾರ ಕೋಲು ಕೋಲ
ಊರ ಸೀಮೆಯ ದಾಟಿ ಕಾಡಗಡಿಯನು ಸೇರಿ
ಕಾಡ ಸಂಪತ್ತ ತರಬನ್ನಿ

ಬೆಳೆದ ಬೆಳಸಿಗೆ ಬನ್ನಿ, ಭೂಮಿತಾಯಿಗೆ ಬನ್ನಿ
ನಾಡ ಸಂಪತ್ತ ಬೆರಿ ಬನ್ನಿ

ಅರಸನ ಅಂಗಳಕ ಸರಸರಂಗಾ ಹೊಯ್ದು
ಹೊರಿಸಿ ತಂದಾರ ಸಿರಿಬನ್ನಿ

ದೇವ ದೇವರ ಬನ್ನಿ, ದೈವ ದೈವದ ಬನ್ನಿ
ನಾವು ಮುಡಿವೂದು ನಮ ಬನ್ನಿ

ಹಡೆದ ತಾಯಿಗೆ ಬನ್ನಿ ಹಡೆದ ತಂದೆಗೆ ಬನ್ನಿ
ಪಡೆದ ಗಂಡನಿಗೆ ನಮ ಬನ್ನಿ

ಚಿನ್ನದ ಕೈಗಡಗ ಚೆನ್ನೇರು ಇಟಗೊಂಡು
ಚಿನ್ನದಾಭರಣ ನಡಬಾಗಿ
ಗೆಜ್ಜೆ ಹೆಜ್ಜೇ ಹಾಕಿ, ಗುಜ್ಜೇರು ಕುಣಿದಾರ
ವಜ್ಜರ ವಡ್ಯಾಣ ಘಲ ಘಲ

ನಾವು ಕುಣಿಯೋಣ ಬನ್ನಿ, ಹ್ಯಾಂವ ಮರಿಯೋಣ ಬನ್ನಿ
ಜೀವ ಒಂದಾಗಿ ಇರಬನ್ನಿ
ಇಂದು ಮುಡಿಯುವ ಬನ್ನಿ ಮುಂದೆಮಗ ಹೊನ್ನಾಗಿ
ಕುಂದಣದಾರೂತಿ ಬೆಳಗುದಕ.

ಸಮಾರೋಪ

ಹೀಗೆ ಜನರ ಹಾಡುಗಳು ರಂಜನೀಯವಾಗಿವೆ. ಇವುಗಳನ್ನು ಹಾಡಬಹುದು. ಇಲ್ಲವೇ ರಂಗದಲ್ಲಿ ಅಭಿನಯಿಸಬಹುದು. ಆಸಕ್ತಿ ಇರುವವರು ಇಂತಹ ಹಾಡುಗಳನ್ನು ಸಂಗ್ರಹಿಸಬಹುದು ಮತ್ತು ಪ್ರಕಟಿಸಬಹುದು.



***

ಕನ್ನಡ ವಿಶ್ವವಿದ… …ವಿ ಮಟ್ಟದವರೆಗೆ ಉತ್ತಮ
ಹಾಗೂ ಉಪಯ… … 'ಪಠ್ಯಪುಸ್ತಕ ರಚನಾ
ವಿಭಾಗ'ವನ್ನು … ಪಠ್ಯಪುಸ್ತಕ ರಚನೆ
ಮಾಡಬೇಕೆಂದು … ನವಸಾಕ್ಷರರಿಗಾಗಿ
ಪುಸ್ತಕ ಬರೆಸುವ… …ಕ್ಕೆ ವಹಿಸಿಕೊಟ್ಟರು.
ವಿಶ್ವವಿದ್ಯಾಲಯ… …ಖ್ಯಾತ ಲೇಖಕರನ್ನು,
ಭಾಷಾತಜ್ಞರನ್ನು, … …ಲ್ಲರ ಅಭಿಪ್ರಾಯ,
ಸಲಹೆ, ಸಹಕಾರ… ಮುದ್ರಣ ವಿನ್ಯಾಸ,
ಚಿತ್ರಗಳ ಮಹತ್ವ… …ನೇಕ ಸಲ ಚರ್ಚಿಸಿ
ಯೋಜನೆಯನ್ನು …

ನವಸಾಕ್ಷರರಿಗಾಗಿ … ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ … ಭಾಷಾತಜ್ಞರಿಂದ
ಪರಿಶೀಲಿಸಲಾಯಿ… …ಕೊಂಡು ಅವರಿಗೆ
ಕಮ್ಮಟಗಳನ್ನು … …ತ ಆಯ್ದ ಜಿಲ್ಲೆ,
ತಾಲೂಕುಗಳಿಗೆ ಕ… …ುವವರಿಂದ ಅದರ
ಗುಣದೋಷಗಳ … ವಿಶ್ವವಿದ್ಯಾಲಯದ
ಗಣಕಯಂತ್ರದಲ್ಲಿ … …ಾಯಕರು ನೀಡಿದ್ದ
ಮಾಹಿತಿಗಳನ್ನೆಲ್ಲ … …ಣವಾಗಿ ವಿಷಯದ
ಆದ್ಯತೆಗಳನ್ನು ನಿ… ಲೇಖಕರು ನಮ್ಮ
ವಿಶ್ವವಿದ್ಯಾಲಯದ … ರೂಪ ಕೊಟ್ಟರು.
ಕಲಾವಿದರು ವಿಷ… …ಕ ಹಸ್ತಪ್ರತಿಗಳನ್ನು
ನವಸಾಕ್ಷರರ ಬಳಿ … ಪ್ರತಿಕ್ರಿಯೆಗಳನ್ನು
ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು